**ಸಾಕ್ಷಿಯನ್ನು ದಿನಾಂಕ 06.08.2025 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ ಆರ್ ಎಸ್ ವಕೀಲರಿಂದಃ**

ಈ ವ್ಯವಹಾರದಲ್ಲಿ ನಾನು ಪ್ರತಿವಾದಿಗೆ ಒಟ್ಟು 15 ಲಕ್ಷ ಹಣ ಕೊಟ್ಟಿದ್ದೇನೆ. ಈ ಬಗ್ಗೆ ಒಂದೇ ಒಂದು ಪತ್ರವಾಗಿದೆ. ಚೆಕ್ ನ್ನು ನಗದೀಕರಿಸಿರುವ ಬಗ್ಗೆ ದಾಖಲಾತಿ ಇದೆ. ತಿಮ್ಮಸಂದ್ರ ಸುಬ್ರಮಣಿ ನನಗೆ ಗೊತ್ತಿಲ್ಲ. ಶಿವಾರೆಡ್ಡಿ ಮತ್ತು ಮಂಜುನಾಥ ಸದರಿ ವ್ಯವಹಾರಕ್ಕೆ ಸಾಕ್ಷಿಯಾಗಿದ್ದಾರೆ. ನನ್ನ ಯಜಮಾನರ ಬ್ಯಾಂಕ್ ಅಕೌಂಟನಿಂದ ಕೊಟ್ಟಿದ್ದೇನೆ ಆಗ ಬ್ಯಾಂಕ್ ಅಕೌಂಟ ಇರಲಿಲ್ಲ ಈಗ ಇದೆ. 10 ಲಕ್ಷ ನಮ್ಮ ಬಳಿ ಇತ್ತು ಎಂದು ತೋರಿಸಲು ದಾಖಲಾತಿ ಇಲ್ಲ ಬೆಳೆ ಬಂದ ಹಣ ಇಟ್ಟಿದ್ದೇವೆ. ಸದರಿ ವಿಚಾರವನ್ನು ನನ್ನ ವಕೀಲರಿಗೆ ತಿಳಿಸಿದ್ದೇನೆ. ಸಬ್ ರಿಜಿಸ್ಟ್ರರ್ ಕಚೇರಿಯಲ್ಲಿ ಹಣವನ್ನು ಕೊಟ್ಟಿದ್ದೇನೆ. ಸಬ್ ರಿಜಿಸ್ಟ್ರರ್ ಕಚೇರಿಯಲ್ಲಿ 10 ಲಕ್ಷ ಹಣ ಕೊಟ್ಟಿರುವ ಬಗ್ಗೆ ದಾಖಲಾತಿಯಲ್ಲಿ ಬರೆಸಿದ್ದೇವೆ. 50 ಸಾವಿರ ಹಣಕ್ಕಿಂತ ಹೆಚ್ಚಿನ ಹಣವನ್ನು ಕೊಡುವಂತಿಲ್ಲ ಎಂದು ತಿಳಿದುಕೊಂಡಿದ್ದೀರಾ ಎಂದರೆ ಅದು ನನಗೆ ಗೊತ್ತಿಲ್ಲ. 5 ಲಕ್ಷ ಹಣವನ್ನು ನನ್ನ ಯಜಮಾನರು ನಗದು ಇಲ್ಲ ಎಂದು ಚೆಕ್ಕ ಮುಖಾಂತರ ಕೊಟ್ಟಿದ್ದಾರೆ. 10 ಲಕ್ಷ ಹಣವನ್ನು ನಮ್ಮ ಯಜಮಾನರ ಖಾತೆಗೆ ವರ್ಗಾಯಿಸಿಕೊಂಡು ಪ್ರತಿವಾದಿಗೆ ಕೊಡಲು ತೊಂದರೆ ಇತ್ತಾ ಎಂದರೆ ತೊಂದರೆ ಇರಲಿಲ್ಲ. ನನ್ನ ಖಾತೆ ಕೆನರಾ ಬ್ಯಾಂಕ್ ನಲ್ಲಿದೆ. ನಾನು 10 ಲಕ್ಷ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ನನ್ನ ಯಜಮಾನರ ಹತ್ತಿರ 16 ಲಕ್ಷ ಹಣ ಸಾಲ ಕೇಳಿದ್ದರು ಅವರು 5 ಲಕ್ಷ ಚೆಕ್ ಮುಖಾಂತರ ಕೊಟ್ಟಿದ್ದರು ಎಂದರೆ ಸರಿಯಲ್ಲ. ಅವರು ಸಾಲವನ್ನು ಕೇಳಿದ್ದನ್ನೆ ನಾವು ದುರುಪಯೋಗ ಮಾಡಿಕೊಂಡು ಸುಳ್ಳು ದಾಖಲಾತಿ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮದ್ಯಾಹ್ನ 3 ಗಂಟೆ ಆಗಿತ್ತು. ಸಬ್ ರಿಜಿಸ್ಟ್ರರ ಕಚೇರಿಯಿಂದ ವಾಪಸ್ಸು ಬರಲು 4 ರಿಂದ 4.30 ಗಂಟೆಯಾಗಿತ್ತು. ಹಣ ಕೊಟ್ಟಿರುವ ಬಗ್ಗೆ ಯಾವುದೇ ವಿಡಿಯೋ ಮಾಡಿಕೊಂಡಿಲ್ಲ. 10 ಲಕ್ಷ ಹಣವನ್ನು ಸಬ್ ರಿಜಿಸ್ಟ್ರರ್ ಕಚೇರಿಯಲ್ಲಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. 10 ಲಕ್ಷ ಹಣ ಕೊಟ್ಟಿರುವ ಬಗ್ಗೆ ಸಬ್ ರಿಜಿಸ್ಟ್ರರ್ ಕಚೇರಿಯವರು ಉಲ್ಲೇಖ ಮಾಡಿದ್ದಾರೆ. ಸಾಲದ ವಿಚಾರವಾಗಿ 2

ಅಗ್ರಿಮೆಂಟಗಳು ಆಗಿದ್ದು 16.11.2019 ರಂದು ಸಹ ಮತ್ತೊಂದು ಅಗ್ರಿಮೆಂಟ್ ಆಗಿತ್ತು ಎಂದರೆ ಸರಿಯಲ್ಲ. ನಾನು ಚೆಕ್ಕು ಕೊಟ್ಟಿರುವುದು 16.11.2019 ರ ಅಗ್ರಿಮೆಂಟ್ ಗೆ ಸಂಬಂಧಪಟ್ಟಿದೆ ಎಂದರೆ ಸರಿಯಲ್ಲ. ನಾನು 2 ನೇ ಅಗ್ರಿಮೆಂಟ್ ನಲ್ಲಿ ಜಮೀನಿನ ಬೆಲೆ 31,07,500 ರೂಪಾಯಿ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಜಮೀನನ್ನು ಖರೀದಿಸುವ ಹಣ ನಮ್ಮ ಬಳಿ ಇರಲಿಲ್ಲ ನಾವು ಸಾಲ ಕೇಳಿದ್ದರಿಂದ 5 ಲಕ್ಷ ಹಣ ಮಾತ್ರ ಕೊಟ್ಟಿದ್ದು ಉಳಿಕೆ ಹಣ ನಮ್ಮ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಅಗ್ರಿಮೆಂಟ ಅಲ್ಲಿ 10 ಲಕ್ಷ ಕ್ಯಾಶ್ ಕೊಟ್ಟಿದ್ದು ಸುಳ್ಳು ಬರವಣಿಗೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ದಿಃ16.11.2019 ರ ಅಗ್ರಿಮೆಂಟ್ ನ ಝೆರಾಕ್ಸ ನ್ನು ಪ್ರತಿವಾದಿಗೆ ನೀಡಿ ಮೂಲ ದಾಖಲಾತಿಯನ್ನು ನಮ್ಮ ಬಳಿ ಇಟ್ಟುಕೊಂಡಿದ್ದೇವೆ ಎಂದರೆ ಸರಿಯಲ್ಲ.

ನಿಪಿ 1 ದಾಖಲಾತಿಯಲ್ಲಿ ಒಕ್ಕಣೆ ಮುಗಿದ ನಂತರ ಗ್ಯಾಪ್ ಇಲ್ಲದಂತೆ ನಮ್ಮ ಹಾಗೂ ಪ್ರತಿವಾದಿಯ ಸಹಿ ಇದೆ ಎಂದರೆ ಸರಿ. ಸಬ್ ರಿಜಿಸ್ಟ್ರರ್ ರವರು ನಿಪಿ 1 ದಾಖಲಾತಿಯಲ್ಲಿ ಪೂರ್ಣ ಪ್ರತಿಫಲ ಅಥವಾ ಭಾಗಶಃ ಪ್ರತಿಫಲ ಪಡೆದ ಯಾವುದೇ ನಮೂದು ಮಾಡದೇ ಹಾಗೇ ಖಾಲಿ ಬಿಟ್ಟಿದೆ ಎಂದರೆ ನಾವು ಹಣ ಕೊಟ್ಟಿದ್ದೇವೆ ಎಂದು ಸಾಕ್ಷಿಯು ನುಡಿಯುತ್ತಾರೆ. ನಾನು ಸಾಲದ ಬದ್ರತೆಗಾಗಿ ಸದರಿ ನಿಪಿ 1 ದಾಖಲಾತಿಯನ್ನು ಮಾಡಿಕೊಂಡಿದ್ದು ಯಾವುದೇ ಜಮೀನು ಮಾರಾಟ ಕರಾರು ಪತ್ರ ಅಲ್ಲ ಎಂದರೆ ಸರಿಯಲ್ಲ. ದಿಃ16.11.2019 ರ ಅಗ್ರಿಮೆಂಟ್ ನ ಝೆರಾಕ್ಸ ನ್ನು ಪ್ರತಿವಾದಿಗೆ ನಾವು ನೀಡಿದ್ದೇವೆ ಎಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ದಾಖಲಾತಿ ಅದೇ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.